# ಓ.. ಹೌಸ್‌ವೈಫಾ..?

ಮಡದಿ ಮೂರು ದಿನದಿಂದ ಮುನಿಸಿಕೊಂಡಿದ್ದಾಳೆ. ಕಾರಣ ಬಹಳ ಸರಳ. ನಾನು ಅವಳನ್ನು ಹೊರಗೆಲ್ಲೂ ನೌಕರಿ ಮಾಡಲು ಕಳಿಸದೇ ಮನೆಯಲ್ಲೇ ಮಹಾಲಕ್ಷ್ಮಿಯಂತೆ ಇಟ್ಟುಕೊಂಡಿರುವುದು. ಇದನ್ನು ಸಹಿಸದ ಜನ ಅವಳನ್ನು 'ಹೌಸ್‌ವೈಫಾ...!' ಎಂದು ಹೀಗಳೆಯುವುದು ಅವಳ ಸುಶಿಕ್ಷಿತ ಮನಕ್ಕೆ ನೋವು ತಂದಿದೆ. ನಾನಾದರೋ ಮದುವೆಗೆ ಮುನ್ನ ಹಾಕಿದ ಮೊದಲ ಕಂಡೀಶನ್ ಎಂದರೆ ಹುಡುಗಿ ವಿದ್ಯಾವಂತೆಯಾಗಿರಬೇಕು, ಆದರೆ ನೌಕರಿ ಮಾಡಬಾರದೆಂದು. ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದ ಮಾಲಿನಿ ನೌಕರಿಯ ಆಸೆ ತೊರೆದು ನನ್ನ ಕೊರಳಿಗೆ ಮಾಲೆ ಹಾಕಿ ನನ್ನ ಪ್ರೀತಿಯ 'ಮಾಲು' ಆದಳು. ಹೆತ್ತವರು ಈಗಿನ ಕಾಲದ ಹುಡುಗ್ರೆಲ್ಲಾ ಹೆಂಡ್ತಿಯಿಂದ ದುಡಿಸ್ಕೊಳ್ಳೋದನ್ನೇ ನೋಡ್ತಾರೆ. ಪಾಪ, ನಮ್ಮ ಅಳಿಯಂದ್ರು ಹೆಂಡ್ತಿ ನೆಮ್ಮದಿಯಾಗಿ ಪೂಜೆ, ಪುನಸ್ಕಾರ ಮಾಡ್ಕೊಂಡು ಮನೆಯಲ್ಲಿದ್ರೆ ಸಾಕು ಅನ್ತಾರಲ್ಲಾ ಎಂದು ಸಂತೋಷಪಟ್ಟಿದ್ದರು. ನನ್ನ ಮನದನ್ನೆಯಾದರೋ ಅಚ್ಚುಕಟ್ಟಾಗಿ ಮನೆ ನಡೆಸಿಕೊಂಡು ನಾನು ಮನೆಗೆ ಬಂದಾಗ ಯಾವ ತಂಟೆ ತಕರಾರುಗಳೂ ಇಲ್ಲದೆ ಸ್ವರ್ಗಕ್ಕೆ ಕಿಚ್ಚು ಹಚ್ಚಿದ್ದಳು. ಹಾಗೆಂದು ಅವಳು ಯಾವುದಕ್ಕೂ ಆಸೆ ಪಡದಷ್ಟು ಅಮಾಯಕಳಲ್ಲದಿದ್ದರೂ ಅತಿಯಾಸೆಪಡುವಷ್ಟು ಅವಿವೇಕಿಯಾಗಿರಲಿಲ್ಲ. ನನ್ನ ಮೂವತ್ತು ಬೈ ನಲವತ್ತು ಅಳತೆಯ ನಿವೇಶನದ ಭೌಗೋಳಿಕ ವ್ಯಾಪ್ತಿಯಲ್ಲೇ ಸಗ್ಗ ಸುಖ ಕಂಡವಳು.

ಎಲ್ಲಾ ಚೆನ್ನಾಗಿರುವಾಗಲೇ ಎಲ್ಲಿಂದಲೋ ಚಂಡಮಾರುತ ಬೀಸಿದಂತೆ ಕಳೆದ ವಾರ ಯಾವುದೋ ಕೆಲಸದ ಮೇಲೆ ಇವಳು ಬ್ಯಾಂಕಿಗೆ ಹೋದಾಗ ಇವಳ ಕಾಲೇಜು ಗೆಳತಿ ಚಂಚಲ ಕ್ಯಾಶ್‌ಕೌಂಟರಿನಲ್ಲಿ ಕುಳಿತಿರುವುದನ್ನು ಕಂಡಿದ್ದಾಳೆ. ಕುಶಲೋಪರಿಯ ನಂತರ 'ಏನೇ ಮಾಲಾ, ಡಿಸ್ಟಿಂಕ್ಷನ್ ಸ್ಟೂಡೆಂಟ್ ನೀನು– ಮನೇಲಿ ಪಾತ್ರೆ ತೊಳ್ಕೊಂಡು ಒಳ್ಳೆ ಅನ್ ಎಜುಕೇಟೆಡ್ ಹೌಸ್‌ವೈಫ್ ತರ ಮನೇಲೇ ಇದ್ದೀಯಲ್ಲೇ...? ನೀನು ಮನಸ್ಸು ಮಾಡಿದ್ರೆ ಇವತ್ತು ಐದಂಕಿ ಸಂಬ್ಳ ತಗೋಬೋದಿತ್ತು...' ಎಂದು ಇವಳ ತಲೆಗೊಂದು ಹುಳ ಬಿಟ್ಟಿದ್ದಾಳೆ. ಯಾವಾಗಲೂ ಮೂವತ್ತೈದರ ಮೇಲೆ ಅಂಕ ತೆಗೆಯದ ಚಂಚಲ ಇಂದು ಬ್ಯಾಂಕ್ ಎಂಪ್ಲಾಯಿಯಾಗಿ ವಾಲಾಡುವುದಲ್ಲದೆ ತನ್ನನ್ನು 'ಹೌಸ್‌ವೈಫಾ...!' ಎಂದು ಹೀಗಳೆದದ್ದು ನನ್ನ ಸಹಧರ್ಮಿಣಿಯ ಸ್ವಾಭಿಮಾನವನ್ನು ಕೆಣಕಿದೆ. ಸರಿ... ಮೂರು ದಿನದಿಂದ ಮನೆಯಲ್ಲಿ ಶೀತಲ ಸಮರ.

ಇತ್ತೀಚೆಗೆ 'ಗೃಹಿಣಿ' ಎಂಬ ಪದವೂ ಕಾಣೆಯಾಗಿದೆ. ಆ ಜಾಗವನ್ನು 'ಹೌಸ್‌ವೈಫ್' ಎಂಬ ಆಂಗ್ಲ ಪದ ಆಕ್ರಮಿಸಿಕೊಂಡಿದೆ. ಗೃಹಿಣಿಯ ಮಾರ್ದವತೆ ಈ ಹೌಸ್‌ವೈಫಿಗಿಲ್ಲ. ಅಮ್ಮನಿಗಿರುವ ಮಾತೃಪ್ರೇಮ ಮಮ್ಮಿಗಿಲ್ಲದಂತೆ. ನಮ್ಮ ಹೌಸ್‌ವೈಫ್ ಮಮ್ಮಿಯರೂ ಈಗ ಗೃಹಕ್ಕೆ ಸೀಮಿತರಾಗಿರದೆ ಕಿಟ್ಟಿ ಪಾರ್ಟಿ, ಕ್ಲಬ್ಬು, ಪಬ್ಬು ಎಂದು ಎಂಪ್ಲಾಯಿಗಳಿಗಿಂತ ಬ್ಯುಸಿಯಾಗಿರುವುದು ಬೇರೆ ವಿಷಯ.

ಪ್ರಶಾಂತ ಸರೋವರದಂತಿದ್ದ ಇವಳ ಮನದಲ್ಲಿ ಚಲನೆಯನ್ನುಂಟು ಮಾಡಿದ ಚಂಚಲೆಯನ್ನು ಚಚ್ಚುವಷ್ಟು ಕೋಪ ಬಂದಿತು. ನನ್ನ ತಾಳ್ಮೆ, ಜಾಣ್ಮೆಯನ್ನು ಬಳಸಿ ಮಡದಿಯ ಮೌನ ಹೋರಾಟಕ್ಕೆ ತೆರೆ ಎಳೆಯಲು ತೀರ್ಮಾನಿಸಿದೆ. 'ನೋಡು ಮಾಲಾ– ನೀನು ವಿದ್ಯಾವಂತೆ, ಬುದ್ಧಿವಂತೆ. ಯಾರೋ ಡಿಗ್ರೇಡ್ ಮಾಡಿದ್ರು ಅಂತ ನಿನ್ನ ಬೆಲೆ ಕಮ್ಮಿಯಾಗುತ್ತಾ...? ವಿದೇಶದಲ್ಲಿ ಗೃಹಿಣಿಯರಿಗೆ 'ಹೋಮ್ ಮೇಕರ್ಸ್', 'ಡೊಮೆಸ್ಟಿಕ್ ಎಂಜಿನಿಯರ್ಸ್' ಅಂತಾರೆ. ಮನೇನ ಯಾವ ಕೊರತೆಯೂ ಇಲ್ಲದಂತೆ ಮ್ಯಾನೇಜ್ ಮಾಡೋದೂ ಒಂದು ಆರ್ಟ್ ಕಣೆ. ನಮ್ಮನೇಗೆ ಯಾರು ಬಂದ್ರೂ ಎಷ್ಟು ಸಂತೋಷ ಪಡ್ತಾರೆ ಗೊತ್ತಾ...? ನಮ್ಮ ಮನೆ, ಗಾರ್ಡನ್ನು, ನೀನು ಮಾಡೋ ರುಚಿಯಾದ ಅಡುಗೆ, ನಿನ್ನ ಅಚ್ಚುಕಟ್ಟುತನ... ಆ ಕಳೆನೇ ಬೇರೆ ಬಿಡು. 'ಯೂ ಆರ್ ಎ ಪರ್‌ಫೆಕ್ಟ್ ಹೌಸ್‌ವೈಫ್ ಅಂಡ್ ಬೆಸ್ಟ್ ಹೋಮ್ ಮೇಕರ್'. ಒಬ್ಬ ಆದರ್ಶ ಗೃಹಿಣಿ. ಇದಕ್ಕಿಂತ ದೊಡ್ಡ ಭಾರತರತ್ನ ಇಲ್ಲ ಬಿಡು' ಎನ್ನುತ್ತಾ ನನ್ನ ಸುದೀರ್ಘ ಭಾಷಣ ಮುಗಿಸಿದೆ.

ನನ್ನ ಮಡದಿ ಹೊಗಳಿಕೆಗೆ ಉಬ್ಬಿಹೋದರೂ ಅನುಮಾನಿಸುತ್ತಾ 'ಆದ್ರೂ... ನನ್ನ ಕಾಲ್ಮೇಲೆ ನಾನು ನಿಂತಿಲ್ಲ, ಸ್ವಾವಲಂಬಿಯಾಗಿಲ್ಲ. ಎಲ್ಲದಕ್ಕೂ ನಿಮ್ನೇ ಕೇಳ್ಬೇಕು...' ಎಂದಳು. 'ಅಯ್ಯೋ ದಡ್ಡೀ, ನಿಜವಾದ ಸ್ವಾವಲಂಬಿ ಅಂದ್ರೆ ನೀನೇ. ನಿನ್ಗೇನು ಕಮ್ಮಿಯಾಗಿದೆ ಹೇಳು. ನಿನ್ಗೆ ತಿಂಗಳಿಗಿಷ್ಟು ಅಂತ ನಾನೇ ದುಡ್ಡು ಕೊಡ್ತಿದೀನಿ. ಎಕ್ಸ್‌ಟ್ರಾ ಬೇಕಾದ್ರೆ ನೀನು ಅಷ್ಟಕ್ಕೂ ಕೇಳೋದು ಯಾರನ್ನ...? ನಿನ್ನ ಗಂಡನ್ನ. ಅದು ನಿನ್ನ ಹಕ್ಕು. ನಿನ್ನ ಗೆಳತಿ ಚಂಚಲ ಒಂದು ರಜೆ ಬೇಕಾದ್ರೂ ಅವ್ಳ ಬಾಸ್‌ನ ಕೇಳ್ಬೇಕು. ಕಸ್ಟಮರ್ಸ್ ಜೊತೆ, ಕೊಲೀಗ್ಸ್ ಜೊತೆ, ಹೈಯರ್ ಆಫೀಸರ್ಸ್ ಜೊತೆ ಬೇಯ್ಬೇಕು. ಅದರ ಜೊತೆಗೆ ಮನೇನೂ ನೋಡ್ಕೋಬೇಕು. ಬೆಳಿಗ್ಗೆ ಒಂದು ಎರೆಹುಳದಂತ ನೂಡಲ್ಸೋ, ಒಣ ಬ್ರೆಡ್ಡೋ, ಮತ್ತೊಂದೋ ತಿಂದು ಹೋದ್ರೆ ಸಂಜೆ ತನ್ನ ಕೆಲಸ. ಈ ಮಧ್ಯೆ ಟ್ರಾನ್ಸ್‌ಫರ್ರು ಅದು ಇದು ಅಂತ ಗೋಳು. ನಿನ್ಗೆ ಬೇಕಾ ಇಂತಾ ಸ್ವಾವಲಂಬನೆ?' ನನ್ನ ತರ್ಕ ಒಪ್ಪಿದ ಮಡದಿ ಹಸನ್ಮುಖಿಯಾದಳು. 'ಸರಿ ಹೋಗು ಈಗ್ಲಾದ್ರೂ ಒಂದು ಸ್ಟ್ರಾಂಗ್ ಕಾಫಿ ಮಾಡ್ಕೊಂಡ್ಬಾ. ಕುಡಿದು ಇಬ್ರೂ ಎಲ್ಲಾದ್ರೂ ಹೊರಗೆ ಹೋಗ್ಬರೋಣ' ಎಂದಾಗ ನನ್ನವಳು ಉಲ್ಲಾಸದಿಂದ ಒಳಗೆ ಹೋಗುವಷ್ಟರಲ್ಲಿ ಕರೆಗಂಟೆ ಸದ್ದಾಯಿತು. ಬಾಗಿಲು ತೆರೆದಾಗ ಕೈಯಲ್ಲಿ ಕೆಲವು ಪೇಪರ್ಸ್ ಹಿಡಿದಿದ್ದ ಇಬ್ಬರು ಮಹಿಳೆಯರು ಒಳ ಬಂದರು. 'ಮೇಡಮ್... ನಾವು ಸೆನ್ಸಸ್‌ನವರು ದಯವಿಟ್ಟು ಬೇಗ ಬೇಗ ನಾವು ಕೇಳೋ ಡೀಟೆಲ್ಸ್ ಕೊಡಿ' ಎನ್ನುತ್ತಾ ಪ್ರಶ್ನಾವಳಿ ಪ್ರಾರಂಭಿಸಿದರು. 'ನಿಮ್ಮ ಹೆಸರು...– ಮಾಲಿನಿ...', 'ವಯಸ್ಸು...– ಇಪ್ಪತ್ತೆಂಟು...' 'ಉದ್ಯೋಗ...– ಗೃಹಿಣಿ...' 'ಓ, ಹೌಸ್‌ವೈಫಾ...?' ಅವರು ರಾಗ ಎಳೆದಾಗ ನನ್ನವಳು ಅಸಹಾಯಕಳಾಗಿ ನನ್ನತ್ತ ನೋಡಿದಳು.

**■ ಸುಮಾ ರಮೇಶ್, ಹಾಸನ**



ಗಣೇಶ್ ಆರ್. ಅರಳಿಕಟ್ಟೆ